ಭರವಸೆಯನ್ನು ಅವರು ಕೊಟ್ಟರು. ಅಬಕಾರಿ ಸಚಿವರು ನಮಗೆ ಪಂಚಾಯಿತಿ ಲೈಸೆನ್ಸ್ ಬೇಕಾಗಿಲ್ಲವೆನ್ನುತ್ತಾರೆ. ಅದಕ್ಕೆ ಅವರಿಂದ ಖಚಿತವಾದ ಉತ್ತರ ಬೇಕು, ಪಂಚಾಯಿತಿಯ ಕಾನೂನು ಪ್ರಕಾರ ಪಂಚಾಯಿತಿಯ ಲೈಸೆನ್ಸ್ ಬೇಕಾಗುತ್ತದೆ. ಪಂಚಾಯಿತಿಯ ಲೈಸೆನ್ಸ್‌ತೆಗೆದುಕೊಂಡಿರಲಿಲ್ಲವೆಂದರೆ ಆ ಸಾರಾಯಿ ಅಂಗಡಿಗಳನ್ನು ಪೋಲೀಸ್ ಇಲಾಖೆಯ ಸಹಾಯದಿಂದ ಪಂಚಾಯಿತಿ ಇಲಾಖೆಯ ಸಹಾಯದಿಂದ ಬಂದ್ ಮಾಡಿಸುತ್ತೇವೆ ಎನ್ನುವ ಖಚಿತ ಭರವಸೆ ಅವರಿಂದ ನಮಗೆ ಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಪ್ರಾಯಶಃ ಗ್ರಹಿಕೆಯಲ್ಲಿ ಆಗಿರತಕ್ಕ ಸ್ವಲ್ಪ ಗೊಂದಲ. ಅವರು ಅಬಕಾರಿ ಕಾನೂನಿನ ಕೆಳಗಡೆಗೆ, ನಮ್ಮಲ್ಲಿ ಯಾರ್ಯಾರು ಪೈಸೆಸ್ಟ್ ಬಿಡ್ಡರ್ ಆಗಿರುತ್ತಾರೆ, ಅದರ ಪ್ರಕಾರ ನಾವು ಕ್ರಮ ಕೈಗೊಳ್ಳುತ್ತೇವೆನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಆದರೆ ಅದಕ್ಕೆ ಬೇರೆ ಬೇರೆ ಕಾಯಿದೆಗಳೂ ಕೂಡ ಲಾಗು ಇರುತ್ತವೆ. ಆಯಾಯ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯಿತಕ್ಕ ಎಲ್ಲ ವ್ಯವಹಾರ ಅಂಗಡಿ ಮುಗ್ಗಟ್ಟುಗಳು ಎಲ್ಲವೂ ಕೂಡ ಆಯಾಯ ಪಂಚಾಯಿತಿಯಿಂದ ಲೈಸೆನ್ಸನ್ನು ತೆಗೆದುಕೊಳ್ಳಬೇಕೆನ್ನತಕ್ಕದ್ದು ನಮ್ಮ ಕರ್ನಾಟಕ ರಾಜ್ಯ ಪಂಚಾಯತ್ ಆಕ್ಟನ ಕೆಳಗೆ ಇದೆ. ಅದರ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು ಗ್ರಾಮಪಂಚಾಯಿತಿಯ ಕರ್ತವ್ಯ. ಅದು ತಪ್ಪಾಗಿ ಮಾಡಿರತಕ್ಕದ್ದು ಇದ್ದರೆ, ಅದಕ್ಕೆ ನಾವು ಫಿರ್ಯಾದೆಯನ್ನು ಕೊಡುತ್ತೇವೆ. ಒಂದು ವೇಳೆ ಫಿರ್ಯಾದೆಯನ್ನು ಕೊಡಲಿಕ್ಕೆ ವಾತಾವರಣ ಅಲ್ಲಿ ಸರಿಯಿಲ್ಲದ ಸಂದರ್ಭ ಬಂದಾಗ ಕೂಡ ಪೋಲೀಸ್‌ಇಲಾಖೆಯ ಅಧಿಕಾರಿಗಳು ಮತ್ತು ಬೇರೆ ಇಲಾಖೆಯ ಅಧಿಕಾರಿಗಳು ಕೂಡ ಸಮನ್ವಯಗೊಳಿಸಬೇಕಾಗುತ್ತದೆ. ಆದ್ದರಿಂದ ನೀವೇನು ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಬೇರೆ ಅಭಿಪ್ರಾಯವಿದೆಯೆಂದು ಹೇಳಿದಿರಿ, ಅವರದು ಕೂಡ ಸಹಮತ ಇದೆ. ಬೇರೆ ಬೇರೆ ಕಾನೂನಿನ ಕೆಳಗೆ ಇರತಕ್ಕದ್ದು ಇದೆ. ಅವರು ಒಪ್ಪಿದ್ದಾರೆ, ನೀವು ಸಹಮತ ಎನ್ನುವ ಶಬ್ದ ಬರಲಿಲ್ಲವೆನ್ನುವ ಕಾರಣಕ್ಕಾಗಿಯೇ ಅವರ ಕಾನೂನು ಬೇರೆ ನಮ್ಮ ಕಾನೂನು ಬೇರೆ ಅಂತ ಅಲ್ಲ, ಎಲ್ಲರ ಕಾನೂನು ಒಂದೇ. ಅದರ ಪ್ರಕಾರ ನಾವು ಕ್ರಮ ಕೈಗೊಳ್ಳುತ್ತೇವೆ.

ನಿಯಮ 351ರ ಅಡಿಯಲ್ಲಿನ ಸೂಚನೆಗಳು

(ಅ) ಬೆಂಗಳೂರು ನಗರ ಕಾರ್ಪೋರೇಷನ್ ಮಿತಿಯಲ್ಲಿ ಬರುವ ಮಡಿವಾಳ ಮುಖ್ಯ ರಸ್ತೆಯ ದುರಸ್ತಿ.

ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೋರೇಷನ್ ಮಿತಿಯಲ್ಲಿ ಬರುವ ಮಡಿವಾಳ ಮುಖ್ಯ ರಸ್ತೆಯು (ಹೊಸೂರು ರಸ್ತೆಗೆ ಸೇರುವವರೆಗೆ) ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ತುಂಬ ತೊಂದರೆಯಾಗಿದೆ. ಅಲ್ಲದೆ , ಭಾರಿ ವಾಹನಗಳಾದ ಲಾರಿ, ಟ್ಯಾಂಕರ್ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಓಡಾಡುತ್ತಿರುವುದರಿಂದ ರಸ್ತೆಯಲ್ಲಿ ಹಳ್ಳ ದಿಣ್ಣೆಗಳು ಬೀಳಲಾಗಿದೆ. ಆದ್ದರಿಂದ ಆ ರಸ್ತೆಯಲ್ಲಿ ದಿನನಿತ್ಯ ಅಪಘಾತಗಳು ಆಗುತ್ತಿವೆ. ವಾಹನಗಳು ದುರಸ್ತಿಗಾಗಿ ದಾರಿಯಲ್ಲಿ ಬಿದ್ದಿರುವುದು ಸರ್ವೇ ಸಾಮಾನ್ಯವಾಗಿದೆ. ಆದ್ದರಿಂದ ಕೂಡಲೇ ಸದರಿ ರಸ್ತೆಯನ್ನು ಪಕ್ಕ ಟಾರ್ ರಸ್ತೆಯನ್ನಾಗಿ ಮಾಡಿ, ಅಲ್ಲಿನ ನಿವಾಸಿಗಳ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್‌ಸಚಿವರು) : ಮಾನ್ಯ ಉಪಾಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಬೆಂಗಳೂರು ನಗರದಲ್ಲಿ ಇರುವ ಮಡಿವಾಳ ಮುಖ್ಯರಸ್ತೆ (ಹೊಸೂರು ರಸ್ತೆಗೆ ಸೇರುವವರೆಗೆ) ಯು ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆ ಬೆಂಗಳೂರು ಮಹಾನಗರ ಪಾಲಿಕೆ ಮಿತಿಯೊಳಗೆ ಇದ್ದರೂ ಸಹಿತ ಇದರ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆ (ರಾಷ್ಟ್ರೀಯ ಹೆದ್ದಾರಿ ವಿಭಾಗ) ಇವರು ನೋಡಿಕೊಳ್ಳುತ್ತಿರುವರು. ಈ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಲು ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ನೀಡಲಾಗುವುದು.

ಎಂ. ಶ್ರೀನಿವಾಸ್ : ಅಲ್ಲಿಗೆ ತಮ್ಮನ್ನೇ ಕರೆದುಕೊಂಡು ಹೋಗಿದ್ದೇನೆ....

ಉಪಾಧ್ಯಕ್ಷರು : ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಎಂ. ಶ್ರೀನಿವಾಸ್ : ಒಂದು ನಿಮಿಷ ಉಪಾಧ್ಯಕ್ಷರೇ, ತಾವು ಹೇಳಿದ್ದೀರಿ, ಬಿ.ಡಿ.ಎ. ಇದೆ. ಕಾರ್ಪೋರೇಷನ್ ಇದೆ ಎಂದು ಹೇಳಿದ್ದೀರಿ. ತಮಗೆ ಗೊತ್ತಿದೆ. ಎರಡು ಸಾರಿ ಪತ್ರಿಕೆಯಲ್ಲಿ ದೊಡ್ಡದಾಗಿ ಫೋಟೋ ಸಹ ಬಂದಿದೆ. ಇದುವರೆಗೂ ರಿಪೇರಿ ಆಗಿಲ್ಲ, ತಮ್ಮನ್ನು ಕರೆದುಕೊಂಡು ಹೋಗಿ ಸುಮಾರು 3 ತಿಂಗಳು ಆಯಿತು, ಯಾವಾಗ ಮಾಡುತ್ತೀರಿ? ಲಿಖಿತವಾಗಿ ಹೇಳಿ. ಆ ರಸ್ತೆ ನೋಡಿ ತಾವು ಬೇಸರ ಬಿದ್ದಿದ್ದೀರಿ ಎಷ್ಟು, ಯಾವ ತಿಂಗಳು ಇಲ್ಲ ಒಂದು ವಾರದೊಳಗೆ ರಿಪೇರಿ ಮಾಡುತ್ತೀರಿ? ರಿಪೇರಿ ಮಾಡುವುದಕ್ಕೆ ತೆಗೆದುಕೊಳ್ಳಿ ಸ್ವಾಮಿ. ರಸ್ತೆಯನ್ನು ಮಾಡಲು ಟೆಂಡರ್ ಕರೆಯುತ್ತೀರಿ, ಮತ್ತೊಂದು ಆಮೇಲೆ ಮಾಡಿ. ರಿಪೇರಿಗೆ ಒಂದು ಡಬ್ಬ ಟಾರ್ ಇಲ್ಲವೇ. ಅದಕ್ಕೆ ನೀವು ಯಾವಾಗ ರಿಪೇರಿ ಮಾಡುತ್ತೀರಿ, ಅದನ್ನು ಹೇಳಿ.

(ಅ) ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಉಪಾಧ್ಯಕ್ಷರೇ, ಬಂಟ್ವಾಳ ನಗರ ಬೆಳೆಯುತ್ತಿರುವ ನಗರ ವಾಹನ ಸಂಚಾರ ಜಾಸ್ತಿಯಾಗಿ ವಾಹನ ನಿಯಂತ್ರಣ ಮಾಡುವುದು ಕಷ್ಟವಾಗಿದೆ. ಆದುದರಿಂದ ದಯಮಾಡಿ ಗೃಹ ಸಚಿವರು ಮುಂದಿನ ವಾರ್ಷಿಕ ಸಾಲಿನಲ್ಲಿ ಬಂಟ್ವಾಳಕ್ಕೆ ಸಂಚಾರಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಗಮನ ಹರಿಸುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1995-96ನೇ ಸಾಲಿನಲ್ಲಿ 20 ಪೋಲೀಸ್ ಠಾಣೆಗಳನ್ನು ತೆರೆಯುವುದು ಸರ್ಕಾರದ ನೀತಿಯಾಗಿದೆ. ಇವುಗಳನ್ನು ಅವುಗಳ ಅಗತ್ಯತೆ ಹಾಗೂ ಆದ್ಯತೆಯನ್ನು ಆಧರಿಸಿ ಮಂಜೂರಾತಿ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಬಂಟ್ವಾಳ ನಗರದಲ್ಲಿ ಸಂಚಾರಿ ಪೋಲೀಸ್‌ಠಾಣೆಯ ಅವಶ್ಯಕತೆಯೂ ಸರಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಹೊಸ ಠಾಣೆಗಳನ್ನು ತೆರೆಯುವಾಗ ಇದನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ಈ ವಿಚಾರದಲ್ಲಿ ಮಾನ್ಯ ರಮಾನಾಥ ರೈ ಅವರು, ಹಿಂದಿನ ಗೃಹ ಮಂತ್ರಿಗಳು ಮತ್ತು ಇತರ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ನನ್ನ ಮೇಲೆ ಬಹಳ ಒತ್ತಾಯವನ್ನು ತಂದಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲೂ ಸಹಿತ ನಾನು ಮಾತನಾಡಿದ್ದೇನೆ. ಇದರ ಅವಶ್ಯಕತೆಯೂ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ಈ ವಿಚಾರವನ್ನು ನಾನು ಬಹಳ ತೀವ್ರವಾಗಿ ಪರಿಶೀಲಿಸುತ್ತೇನೆ.